| | |
|---|---|
| <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ. ನಂ.**30/2022** | |
| ಚಾಸಾ **-4** | |
| ಪ್ರಾಸಾ **-5** | |
| ಸಾಕ್ಷಿದಾರರ ಹೆಸರು | ವಿಠಲ ಜಾಧವ |
| ತಂದೆ/ಗಂಡ/ತಾಯಿ ಹೆಸರು | ಅಪ್ಪಾಸಾಬ |
| ವಯಸ್ಸು | **53** ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಸಾವಳಗಿ |

**<u>ಸಾಕ್ಷಿಯನ್ನು ದಿನಾಂಕಃ-16-07-2024ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-</u>**

ದಿನಾಂಕ 03-02-2022 ರಂದು ಬೆಳಿಗ್ಗೆ 10 ಗಂಟೆಗೆ ನಾನು ಮತ್ತು ಚಾಸಾ-5 ರವರು ತಿರುಗಾಡಿಕೊಂಡು ಹೋಗಿದ್ದೆವು. ಆಗ ಅಂಗಡಿಯಲ್ಲಿ ಕಳ್ಳತನವಾಗಿದೆ ಎಂದು ಗೊತ್ತಾಗಿದೆ. ನಂತರ ಅಂಗಡಿಯಲ್ಲಿ ಹೋಗಿ ನೋಡಿದ್ದೇವೆ. ಅಲ್ಲಿ ಮೂರು ಪಂಪಸೆಟ್‌ಗಳು ಕಳ್ಳತನವಾಗಿದ್ದವು. ಹಿಂದಿನ ಸೀಟನ್ನು ಎಬ್ಬಿಸಿ ಕಳ್ಳತನ ಮಾಡಿದ್ದರು. ಅಂಗಡಿಯ ಮಾಲಿಕರನ್ನು ವಿಚಾರಿಸಿದಾಗ ಸದರಿಯವರು ತಮ್ಮ ಅಂಗಡಿಯನ್ನು ಮುಚ್ಚಿಕೊಂಡು ಹೋಗಿದ್ದು, ಮಾರನೇ ದಿನ ಬಂದು ನೋಡಿದಾಗ ಕಳ್ಳತನ ಆಗಿತ್ತು ಎಂದು ಹೇಳಿದರು. ನಂತರ ಚಾಸಾ-1 ಇವರು ಕಳ್ಳತನ ಆಗಿದ್ದರ ಬಗ್ಗೆ ಪ್ರಥಮ ವರ್ತಮಾನ ಹೇಳಿಕೆ ನೀಡಿರುವುದಾಗಿ ಹೇಳಿದ್ದಾರೆ. ಪೋಲಿಸ ಠಾಣೆಗೆ ನಮ್ಮನ್ನು 15 ದಿನ ಅಥವಾ ಒಂದು ತಿಂಗಳ ಒಳಗಾಗಿ ಕರೆದಿದ್ದರು. ಪೋಲಿಸ ಠಾಣೆಯಲ್ಲಿ ಆರೋಪಿತರು ಇದ್ದರು. ಆರೋಪಿತರೊಂದಿಗೆ ನಾನು ಮಾತನಾಡಿಲ್ಲ. ಠಾಣೆಯಲ್ಲಿ ಪಂಪಸೆಟ್‌ಗಳು ಇದ್ದವು.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)**

**<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>**

ಪೋಲಿಸ ಠಾಣೆಗೆ ನನ್ನನ್ನು ಕರೆಸಿದಾಗ ಆರೋಪಿತರು ಮತ್ತು ಪಂಪಸೆಟ್‌ಗಳು ಇದ್ದವು. ಪೋಲಿಸ ಠಾಣೆಯಲ್ಲಿ ಕೆಎ-48/ಕ್ಯೂ-4495 ಮತ್ತು ನೋಂದಣಿ ನಂಬರ ಇಲ್ಲದ ಪ್ಲಾಟೀನಾ ಮೋಟರ್ ಸೈಕಲ್ ಇದ್ದವು ಎಂದರೆ ಸರಿ. ನಾನು ಪೋಲಿಸ ಠಾಣೆಯಲ್ಲಿ ಆರೋಪಿತರನ್ನು ವಿಚಾರಿಸಿದಾಗ ಸದರಿಯವರು ಮೇಲೆ ಹೇಳಿದ ಮೋಟಾರ ಸೈಕಲ್ ಮೇಲೆ ಬಂದು ಚಾಸಾ-1ರವರ ಅಂಗಡಿಯ ತಗಡು ತೆಗೆದು, ಸ್ಕ್ರೂಡ್ರೈವರನಿಂದ ಸ್ಕ್ರೂ ಬಿಚ್ಚಿ ತಗಡನ್ನು ಬೆಂಡ್ ಮಾಡಿ,

ಹೋಲ್ ಮಾಡಿ ಒಳಗಡೆ ಹೋಗಿ ಪಂಪಸೆಟ್ ಕಳ್ಳತನ ಮಾಡಿರುವುದಾಗಿ ಆರೋಪಿತರು ನಮಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಆರೋಪಿತರಿಗೆ ....... ಬಗ್ಗೆ ಹೇಳಿದರು ಎಂದು ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-17 ಎಂದು ಗುರುತಿಸಲಾಯಿತು. ನಮ್ಮ ಮುಂದೆ ಆರೋಪಿತರು ಘಟನೆ ಬಗ್ಗೆ ಹೇಳಿದ್ದಾರೆ ಎಂದರೆ ಸಾಕ್ಷಿ ಪೋಲಿಸರು ಕೇಳಿದ್ದಾರೆ ಆಗ ಹೇಳಿದ್ದಾರೆ ಎಂದು ಹೇಳುತ್ತಾರೆ.

**<u>ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ. ಎಸ್ ಸಿ ಕೆ ವಕೀಲರಿಂದಃ-</u>**

ಕಳ್ಳತನ ಆದಂತಹ ಅಂಗಡಿಯ ನಂಬರ್ ನನಗೆ ಹೇಳಲು ಬರುವುದಿಲ್ಲ. ಚಾಸಾ-1 ನನ್ನ ಸ್ನೇಹಿತ ಎಂದರೆ ಸಾಕ್ಷಿ ನನ್ನ ಪರಿಚಯಸ್ಥ ಎಂದು ಹೇಳುತ್ತಾರೆ. ಪಂಪಸೆಟ್ ಮೋಟಾರಗಳ ನಂಬರ್ ಮತ್ತು ಬಣ್ಣ ಹೇಳಲು ಬರುವುದಿಲ್ಲ. ಪೋಲಿಸರ ಮುಂದೆ ನಾನು ಹೇಳಿಕೆ ಮತ್ತು ಮರುಹೇಳಿಕೆಯನ್ನು ಕೊಟ್ಟಿಲ್ಲ. ನಾನು ಮತ್ತು ಚಾಸಾ-5 ಅಂಗಡಿಯ ಹತ್ತಿರ ಹೋದಾಗ ಕಳ್ಳತನವಾಗಿದ್ದರ ಬಗ್ಗೆ ನಮಗೆ ಗೊತ್ತಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಮುಂದೆ ಆರೋಪಿತರು ಘಟನೆಯ ಬಗ್ಗೆ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 2ನೇ ಆರೋಪಿ ಪರ ವಕೀಲರು ಹಾಜರ ಇದ್ದು, 1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.